ಒಂದೇ ಕ್ಷಣದಲ್ಲಿ ನನ್ನ ವಿಕಟನಗೆ ಮಾಯವಾಗಿ ಹೋಯಿತು. ನನ್ನ ಈ ನಾಟಕ ಮಹೋನ್ನತ ಹಾಸ್ಯದ ಒಂದು ಸನ್ನಿವೇಶ ಮಾತ್ರ ಆಗಬಹುದೆಂದುಕೊಂಡಿದ್ದೆ. ಆದರೆ ಅತ್ಯಂತ ಸುಕೋಮಲವಾದ ಒಂದು ಪುಟ್ಟ ಹೃದಯಕ್ಕೆ ನಾನು ಅತ್ಯಂತ ಕ್ರೂರವಾದ ನೋವನ್ನು ನೀಡಿದ್ದೆ. ನನ್ನ ಈ ಕ್ರೌರ್ಯದ ವಿಕೃತಿಯೆಲ್ಲ ಭುಗಿಲೆದ್ದು ನನ್ನನ್ನೇ ಹೀಯಾಳಿಸತೊಡಗಿತ್ತು. ಒದ್ದೋಡಿಸಿದ ನಾಯಿಯಂತೆ ನನ್ನ ಸ್ಥಿತಿಯಾಗಿ, ನಾನು ನಾಚಿಕೆಯಿಂದ ಮೌನವಾಗಿ ಅಲ್ಲಿಂದ ಹೊರನಡೆದೆ.

ಇಲ್ಲಿಯ ತನಕ ನಾನು ಕುಸುಮಳನ್ನು ನೋಡುತ್ತಿದ್ದ ದೃಷ್ಟಿಯೇ ಬೇರೆಯಾಗಿತ್ತು. ಆಕೆ ಕೈಲಾಸ ಬಾಬುವಿನ ಮೊಮ್ಮಗಳು ಹಾಗು ಓರ್ವ ಗಂಡನನ್ನು ಆಕರ್ಷಿಸಲು ಹತಾಶಳಾಗಿ ದಾರಿ ಕಾಯುತ್ತಿರುವ ಆಕೆ, ಮದುವೆ ಮಾರ್ಕೆಟ್ಟಿನಲ್ಲಿ ಅಷ್ಟೇನೂ ಬೆಲೆ ಸಿಗದ ಒಂದು ವಸ್ತು ಎಂದೆಲ್ಲ ನಾನು ಪರಿಭಾವಿಸಿದ್ದೆ. ಆದರೆ ನಾನು ಆಶ್ಚರ್ಯಚಕಿತನಾಗಿ, ಆ ಕೋಣೆಯ ಒಂದು ಮೂಲೆಯಲ್ಲಿ ಒಂದು ಮಾನವೀಯ ಹೃದಯ ಮಿಡಿಯುತ್ತಿತ್ತೆಂಬುದನ್ನು ಅರಿತುಕೊಂಡಿದ್ದೆ.

ಅಂದು ಇಡೀ ರಾತ್ರಿ ನಾನು ನಿದ್ರಿಸಲೇ ಇಲ್ಲ. ನನ್ನ ಮನಸ್ಸು ಅಲ್ಲೋಲ–ಕಲ್ಲೋಲವಾಗಿತ್ತು. ಮರುದಿನ ಮುಂಜಾನೆ ಬೇಗ ಎದ್ದು, ಕದ್ದು ತಂದಿದ್ದ ಆ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು, ಕೈಲಾಸ ಬಾಬುವಿನ ಮನೆಗೆ ಹೋದೆ. ಅವುಗಳನ್ನು ರಹಸ್ಯವಾಗಿ ಗಣೇಶನ ಕೈಯಲ್ಲಿ ಕೊಟ್ಟು ಬರಬೇಕೆಂದು ಮಾಡಿದ್ದೆ. ಅಲ್ಲಿ ಬಾಗಿಲ ಹೊರಗೆ ನಿಂತು ದಾರಿ ಕಾದೆ. ಯಾರೂ ಕಾಣದಂತಾಗಿ, ಮೆಟ್ಟಲುಗಳನ್ನೇರಿ ಕೈಲಾಸ ಬಾಬುವಿನ ಕೋಣೆಯವರೆಗೆ ಹೋದೆ. ಅಲ್ಲಿ ಕುಸುಮ ತುಂಬ ಗೆಲುವಾದ ದನಿಯಲ್ಲಿ ತನ್ನ ತಾತನಿಗೆ ಅಂಗಲಾಚುತ್ತಿದ್ದುದು ಆತನಿಗೆ ಕೇಳಿಸಿತು. "ನನ್ನ ಅಕ್ಕರೆಯ ದಾದಾ, ನಿನ್ನೆ ಛೋಟಾ ಲಾರ್ಡ್ ಸಾಹೀಬರು ನಮ್ಮ ಮನೆಗೆ ಬಂದು ನಿನಗೆ ಹೇಳಿದ್ದನ್ನು ಒಂದು ಶಬ್ದ ಬಿಡದೆ ನನಗೆ ಹೇಳು. ಮತ್ತೊಮ್ಮೆ ಅದನ್ನೆಲ್ಲ ಕೇಳಬೇಕೆಂದು ನಾನು ಚಡಪಡಿಸುತ್ತಿರುವೆ."

ದಾದಾನಿಗೆ ಅಷ್ಟೇ ಬೇಕಿತ್ತು. ನಯಾಂಜೋರದ ಹಿಂದಿನ ಮನೆತನಗಳ ಕುರಿತು ಚೋಟಾ ಲಾರ್ಡ್ ಸಾಹೀಬರು ವ್ಯಕ್ತಪಡಿಸಿದ ಭಾವನೆಗಳನ್ನು ಬಣ್ಣಿಸಿ ಹೇಳುವಾಗ ಆತನ ಮುಖ ಹೆಮ್ಮೆಯಿಂದ ಬೆಳಗುತ್ತಿತ್ತು. ಕುಸುಮ ಆತನೆದುರು ಕುಳಿತು, ತದೇಕ ಚಿತ್ತದಿಂದ ಆತನ ಮುಖವನ್ನೇ ನೋಡುತ್ತಿದ್ದಳು. ತನ್ನ ವೃದ್ಧ ತಾತನ ಮೇಲಿನ ಪ್ರೀತಿಯಿಂದ, ತನ್ನ ಪಾತ್ರವನ್ನು ಸಹ ಸಂಪೂರ್ಣವಾಗಿ ನಿಭಾಯಿಸಲು ಆಕೆ ದೃಢ ನಿಶ್ಚಯ ಮಾಡಿದ್ದಳು.

ಆ ದೃಶ್ಯ ಆಳವಾಗಿ ನನ್ನ ಹೃದಯ ಕಲಕಿತು ಹಾಗೂ ಅದರಿಂದ ನನ್ನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ನಾನು ಮೌನವಾಗಿ ಅಲ್ಲಿಯೇ ನಿಂತುಕೊಂಡಿದ್ದೆ. ಕೈಲಾಸ ಬಾಬು, ಛೋಟಾ ಲಾರ್ಡ್ ಸಾಹೀಬರ ಅದ್ಭುತ ಭೇಟಿಯ ಪ್ರಸಂಗವನ್ನು ರಸವತ್ತಾಗಿ ವರ್ಣಿಸಿ, ಮಾತು ಮುಗಿಸಿದ ನಂತರ ಆತ ಅಲ್ಲಿಂದ ಹೊರಟು ಹೋದ. ಆಮೇಲೆ, ನಾನು ಕದ್ದ ವಸ್ತುಗಳನ್ನೆಲ್ಲ ಆ ಹುಡುಗಿಯ ಪಾದದ ಬಳಿ ಇರಿಸಿ, ಒಂದು ಶಬ್ದ ಕೂಡ ಉಸುರದೆ ಅಲ್ಲಿಂದ ಹೊರಬಂದೆ. ಆ ದಿನ ಸಂಜೆ, ಮತ್ತೊಮ್ಮೆ ಕೈಲಾಸ ಬಾಬು ಅವರನ್ನು ಭೇಟಿಯಾಗಲು ಹೋದೆ. ನಮ್ಮ ಹೊಸಕಾಲದ ಅನಿಷ್ಟ ಪದ್ಧತಿಯಂತೆ, ಈ ಮೊದಲು ಆತನನ್ನು ಭೆಟ್ಟಿಯಾಗಲು ಹೋದಾಗ, ನಾನೆಂದೂ ಆ ವೃದ್ಧನಿಗೆ ವಂದನೆ ಅಥವಾ ಶುಭಾಶಯ ಹೇಳಿರಲಿಲ್ಲ. ಆದರೆ ಈ ದಿನ ನಾನು ತಲೆಬಾಗಿ, ಆತನ ಪಾದ ಮುಟ್ಟಿ ನಮಸ್ಕರಿಸಿದೆ. ಛೋಟಾ ಲಾರ್ಡ್ ಸಾಹೀಬರು ತನ್ನ ಮನೆಗೆ ಬಂದು ಹೋದದ್ದೇ ನನ್ನ ವಿನೀತ ವರ್ತನೆಗೆ ಕಾರಣ ಎಂದು ಕೈಲಾಸ ಬಾಬು ಅಂದುಕೊಂಡಿರಬೇಕು. ಆತನ ಹಾವ ಭಾವದಿಂದಲೇ ನನಗದೆಲ್ಲ ಮನವರಿಕೆಯಾಗಿತ್ತು. ನನ್ನ ನಮ್ರ ಭಾವ ಕಂಡು ಆತ ಕೃತಾರ್ಥನಾಗಿದ್ದ. ಅಲ್ಲದೆ ಆತನ ಕಣ್ಣುಗಳಲ್ಲಿ ಒಂದು ಬಗೆಯ ಸೌಮ್ಯ ಠೀವಿ ಮಿನುಗುತ್ತಿತ್ತು. ಅಷ್ಟರಲ್ಲಿ ಆತನ ಗೆಳೆಯರು ಅಲ್ಲಿ ಗುಂಪುಗೂಡಿದ್ದರು. ಅದಾಗಲೇ, ಉಪರಾಜ್ಯಪಾಲರ ಭೇಟಿಯ ಪ್ರಸಂಗವನ್ನು